# ಅಮೇರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

**ಭಾಗ ೨೧**

## ಸ್ವಾಮಿ ವಿವೇಕಾನಂದರ ಅಮೆರಿಕದ ಮಧ್ಯಪ್ರಾಚ್ಯ ಪ್ರವಾಸ (ಮುಂದುವರಿದ ಭಾಗ)

**ಸ್ವಾ**ಮಿ ವಿವೇಕಾನಂದರು ಅಮೆರಿಕೆಯ ಮಧ್ಯಪ್ರಾಚ್ಯ ಪ್ರದೇಶಗಳ ಪ್ರವಾಸದಲ್ಲಿ ಇದ್ದಾಗ, ಚಿಕಾಗೋದಲ್ಲಿರುವ ಹೇಲ್ ಕುಟುಂಬದ ಮನೆಯನ್ನೇ ತಮ್ಮ ಕೇಂದ್ರಸ್ಥಳವನ್ನಾಗಿ ಮಾಡಿಕೊಂಡಿದ್ದರು. ವಿವಿಧ ಊರುಗಳ ಪ್ರವಾಸವನ್ನು ಮುಗಿಸಿಕೊಂಡು, ಹೇಲ್ ಕುಟುಂಬದವರ ಮನೆಗೇ ಅವರು ವಿಶ್ರಾಂತಿಗಾಗಿ ಬರುತ್ತಿದ್ದರು. ಕುಟುಂಬದ ಜನರ ಆತ್ಮೀಯತೆಯಿಂದ ಅವರ ಮನವು ಪ್ರಭಾವಿತವಾಗಿತ್ತು. ಈ ಕುಟುಂಬದ ಪರಿಚಯವನ್ನು ಸ್ವಾಮೀಜಿ, ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಈ ಪತ್ರದಲ್ಲಿ ಹೀಗೆ ಮಾಡಿಕೊಡುತ್ತಾರೆ:

''ನನ್ನ ಕಾಗದವನ್ನು ಯಾರ ವಿಳಾಸಕ್ಕೆ ನೀನು ಇಲ್ಲಿ ಕಳುಹಿಸಿದೆಯೋ, ಆ ಹೇಲ್ ದಂಪತಿಗಳ ವಿಚಾರವಾಗಿ ನಾನು ನಿನಗೆ ಸ್ವಲ್ಪ ಹೇಳುತ್ತೇನೆ. ಅವರು, ಅವರ ಹೆಂಡತಿ ವೃದ್ಧ ದಂಪತಿಗಳು. ಅವರಿಗೆ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಗಂಡು ಮಗ, ಇಬ್ಬರು ಸೋದರ ಸೊಸೆಯರು ಇದ್ದಾರೆ. ಮಗನು ಪರದೇಶದಲ್ಲಿ ಸಂಪಾದನೆಯನ್ನು ಮಾಡುತ್ತಿರುವನು. ಹೆಣ್ಣು ಮಕ್ಕಳು ಮನೆಯಲ್ಲಿ ವಾಸವಾಗಿದ್ದಾರೆ. ಈ ದೇಶದಲ್ಲಿ ಸಂಬಂಧ ಹೆಣ್ಣುಮಕ್ಕಳ ಮೂಲಕ. ಮಗನು ಮದುವೆಯಾದ ಮೇಲೆ ಹೊರಗೆ ಬಂದಂತೆಯೇ... ''

ಇನ್ನೊಂದು ಸಂದರ್ಭದಲ್ಲಿ ಸ್ವಾಮೀಜಿ ಹೇಲ್ ಕುಟುಂಬದವರ ಬಗ್ಗೆ ಹೀಗೆ ಬರೆಯುತ್ತಾರೆ: ''ಶ್ರೀ ಹೇಲ್ ಅವರ ಮನೆ ನನ್ನ ಚಿಕಾಗೋ ನಗರದ ಕೇಂದ್ರ. ಅವರ ಪತ್ನಿಯನ್ನು ನಾನು ತಾಯಿ ಎಂದು ಕರೆಯುತ್ತೇನೆ. ಅವರ ಇಬ್ಬರು ಹೆಣ್ಣುಮಕ್ಕಳು ನನ್ನನ್ನು ಅಣ್ಣ ಎಂದು ಕರೆಯುತ್ತಾರೆ. ಅದರಷ್ಟು ಪವಿತ್ರ ದಯಾಳು ಕುಟುಂಬವನ್ನು ನಾನು ನೋಡಿಲ್ಲ. ಸಹೋದರರನೇ, ಅವರು ಹಾಗೆ ಇಲ್ಲದೆ ಇದ್ದರೆ, ದೇವರು ಅವರ ಮೇಲೆ ತನ್ನ ಅನುಗ್ರಹವನ್ನು ಅಷ್ಟು ಬೀರುತ್ತಿದ್ದನೆ? ಅವರು ಎಷ್ಟು ಅದ್ಭುತ ದಯಾಶೀಲರು! ಯಾವುದಾದರೊಂದು ಸ್ಥಳದಲ್ಲಿ ಬಡವನೊಬ್ಬನು ಕಷ್ಟದಲ್ಲಿರುವನು ಎಂದು ಕೇಳಿದರೆ, ಗಂಡಸರು ಹೆಂಗಸರು ಎಲ್ಲರೂ ಅಲ್ಲಿಗೆ ಹೋಗಿ ಅವನಿಗೆ ಅನ್ನ ಬಟ್ಟೆ ಕೊಡುತ್ತಾರೆ, ಕೆಲಸವನ್ನೂ ಕೊಡಿಸುತ್ತಾರೆ. ಆದರೆ ನಾವು ಏನು ಮಾಡುತ್ತೇವೆ!''

ಹೇಲ್ ದಂಪತಿಗಳು, ಅವರ ಇಬ್ಬರು ಹೆಣ್ಣುಮಕ್ಕಳು ಮತ್ತು ಇಬ್ಬರು ಸೋದರ ಸೊಸೆಯರೊಂದಿಗೆ, ಸಂಬಂಧಿಯ ಏಳು ವರ್ಷದ ಹೆಣ್ಣುಮಗಳಾದ ಮೇರಿ ಮೆಕೆಂಡ್ಲಿ ಕೂಡ ಚಿಕಾಗೋದ ಆ ದೊಡ್ಡ ಮನೆಯಲ್ಲಿ ವಾಸಿಸುತ್ತಿದ್ದಳು. ಆಕೆಯು ದೊಡ್ಡವಳಾದಾಗ, ತನ್ನ ನೆನಪುಗಳನ್ನು ಹೀಗೆ ಹೇಳಿಕೊಳ್ಳುತ್ತಾಳೆ: ''ಸ್ವಾಮಿ ವಿವೇಕಾನಂದರನ್ನು ಬಾಲ್ಯದಲ್ಲಿ ನೋಡಿದ ನೆನಪು ನನಗೆ ಚೆನ್ನಾಗಿಯೇ ಇದೆ. ಅವರದು ಹೊಳೆಯುತ್ತಿದ್ದ ಕಣ್ಣುಗಳು. ಅವರು ಸುಂದರವಾದ ಪೋಷಾಕನ್ನು ಮತ್ತು ಪರಿಶುದ್ಧ ಬಿಳಿಯ ಪೇಟವನ್ನು ಧರಿಸಿದ್ದರು. ಅವರು ನನ್ನ ಕಡೆಗೆ ಬೆರಳು ತೋರಿಸಿ ಹೇಳಿದರು: 'ಈ ಮಗು ಅಗ್ನಿಯ ಉಪಾಸಕಿ. ನಿಜಕ್ಕೂ ನನಗೆ ಬೆಂಕಿ ಅಂದರೆ ತುಂಬ ಇಷ್ಟ. ಬೆಂಕಿಯ ಸ್ಥಾನಗಳನ್ನು ನಾನು ಬಹಳ ಇಷ್ಟಪಡುತ್ತಿದ್ದೆನು. ಅದರಂತೆಯೇ ನನಗೆ ಸೂರ್ಯನು ಕೂಡ ಬಹಳ ಪ್ರಿಯನೆ.' ''

ಮೇರಿ, ಹೇಲ್ ಕುಟುಂಬದ ಒಬ್ಬಳು ಹೆಣ್ಣು ಮಗಳು. ಆಕೆ ಸ್ವಾಮಿ ಅಭೇದಾನಂದಯವರಿಗೆ ಸ್ವಾಮೀಜಿಯವರ ಬಗೆಗಿನ ತನ್ನ ನೆನಪುಗಳನ್ನು ಹೇಳಿಕೊಂಡಳು. ಸ್ವಾಮಿ ಅಭೇದಾನಂದಜಿ ಇದನ್ನು ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ಬರೆಯುತ್ತಾರೆ: ''ಒಂದು ದಿನ ಸ್ವಾಮಿ ವಿವೇಕಾನಂದರಿಗೆ ಮಂಜಿನಲ್ಲಿ ಆಡುವ ಸ್ಕೇಟಿಂಗ್ ಕಲಿತುಕೊಳ್ಳುವ ಬಯಕೆ ಉಂಟಾಯಿತು. ಅವರು ತಮ್ಮ ಬೂಟುಗಳಿಗೆ ಸ್ಕೇಟ್‌ಗಳನ್ನು ಕಟ್ಟಿಕೊಂಡರು. ಹೇಲ್ ಕುಟುಂಬದವರ ಕೊಠಡಿಗಳಿಗೆ ಹಾಸಿದ್ದ ಬೆಲೆಬಾಳುವ ರತ್ನಗಂಬಳಿಗಳ ಮೇಲೆ ಸ್ಕೇಟಿಂಗ್ ಅನ್ನು ಅಭ್ಯಾಸ ಮಾಡಿದರು. ಮನೆಯಲ್ಲಿನ ಯಾರೂ ಇದನ್ನು ಆಕ್ಷೇಪಿಸಲಿಲ್ಲ. ''

ಮನೆಯವರೆಲ್ಲರಿಗೂ ಸ್ವಾಮೀಜಿ ಪ್ರೀತಿಯ 'ಸಹೋದರ'ನಾಗಿದ್ದರು; ಸ್ವಾಮೀಜಿಯೂ ಆ ಕುಟುಂಬದ 'ಸಹೋದರಿಯರನ್ನು' ಆಳವಾಗಿ ಪ್ರೀತಿಸುತ್ತಿದ್ದರು. ಈ ಸಹೋದರಿಯರಲ್ಲೆಲ್ಲ ಮೇರಿ ಹೇಲ್ ಅನ್ನು ಸ್ವಾಮೀಜಿ ತುಂಬ ಮೆಚ್ಚಿಕೊಂಡಿದ್ದರು.

### ಡೆಟ್ರಾಯ್ಟ್ ನಗರದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು ಮೆಂಫಿಸ್ ಪಟ್ಟಣದಿಂದ ಜನವರಿ ೨೨, ೧೮೯೪ರಂದು ತೆರಳಿ, ಜನವರಿ ೨೫, ೧೮೯೪ರಂದು ಶಿಕಾಗೋ ನಗರವನ್ನು ತಲುಪಿದರು. ಹಾಗೂ ಅಲ್ಲಿನ ಕೆಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಫೆಬ್ರವರಿ ೧೧, ೧೮೯೪ರಂದು ಡೆಟ್ರಾಯ್ಟ್ ನಗರವನ್ನು ತಲುಪಿದರು.

ಡೆಟ್ರಾಯ್ಟ್ ನಗರದಲ್ಲಿ ಜರುಗಿದ ಸ್ವಾಮೀಜಿಯವರ ಪ್ರವಚನಗಳ ವಿವರವನ್ನು ತಿಳಿದುಕೊಳ್ಳುವ ಮೊದಲು, ಆಗಿನ ಕಾಲ

ದಲ್ಲಿ ಆ ನಗರದಲ್ಲಿದ್ದ ಪ್ರಕ್ಷುಬ್ಧ ಪರಿಸ್ಥಿತಿಯ ಬಗ್ಗೆ ತಿಳಿದುಕೊಳ್ಳುವುದು ಅತ್ಯಾವಶ್ಯಕ. ಡೆಟ್ರಾಯ್ಟ್ ನಗರವು ಒಂದು ಕ್ರಿಯಾಶೀಲ ನಗರವಾಗಿತ್ತು. ಅದು ಒಂದು ಕೈಗಾರಿಕಾ ನಗರವಾಗಿತ್ತು. ಮೋಟಾರು ವಾಹನಗಳ ರಾಜಧಾನಿಯೆಂದು ಮುಂದೆ ಅದು ಕರೆಸಿಕೊಂಡಿತು. ಅದಕ್ಕೆ ಮೊದಲೇ ಇಲ್ಲಿನ ಜನರು ಕಾರ್ಯ ತತ್ಪರತೆಗೆ ಮತ್ತು ಉದ್ಯಮಶೀಲತೆಗೆ ಪ್ರಸಿದ್ಧರಾಗಿದ್ದರು. ಅಮೆರಿಕಾದ ಉಳಿದ ರಾಜ್ಯಗಳಿಗೆ ಹೋಲಿಸಿದಲ್ಲಿ, ಇಲ್ಲಿನ ಜನರು ಬಹಳ ಚಂಚಲರಾಗಿದ್ದರು ಮತ್ತು ಹೊಸ ಭಾವನೆಗಳನ್ನು ಮತ್ತು ನೂತನ ಆವಿಷ್ಕಾರಗಳನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತಿದ್ದರು. ಕೈಗಾರಿಕಾರಂಗವು ಸಮೃದ್ಧಿಯಾಗಿತ್ತು. ಜನರು ಅಪಾರ ಮಾನಸಿಕ ಮತ್ತು ದೈಹಿಕ ಶಕ್ತಿಗಳಿಂದ ಕೂಡಿದ್ದರು. ಆದರೆ ಹೆಚ್ಚು ಸಂಪ್ರದಾಯಸ್ಥರಾಗಿದ್ದರು. ಶಿಕಾಗೋ ನಗರದಲ್ಲಿ ಸ್ವಾಮೀಜಿಯವರು ಪಡೆದ ಪ್ರಸಿದ್ಧಿಯು ಕೆಲವು ಕಟ್ಟಾ ಕ್ರೈಸ್ತ ಪಾದ್ರಿಗಳಿಗೆ ಕೋಪ ಬರುವಂತೆ ಮಾಡಿತ್ತು. ಅವರು ಸ್ವಾಮೀಜಿಯವರನ್ನು ನೇರವಾಗಿಯೇ ವಿರೋಧಿಸುತ್ತಿದ್ದರು. ಇಂಥ ಕಠಿಣ ಸಂದರ್ಭದಲ್ಲಿ ಸ್ವಾಮೀಜಿ ಡೆಟ್ರಾಯ್ಟ್ ನಗರಕ್ಕೆ ಆಗಮಿಸಿದರು.

ಶಿಕಾಗೋ ನಗರವು ಡೆಟ್ರಾಯ್ಟ್ ಪಟ್ಟಣದಿಂದ ೨೭೦ ಮೈಲುಗಳ ದೂರದಲ್ಲಿತ್ತು. ಆದರೆ ಕೊರೆಯುವ ಶೀತ ವಾತಾವರಣದ ಕಾರಣದಿಂದಾಗಿ, ರೈಲ್ವೇ ಹಳಿಗಳ ಮೇಲೆಲ್ಲಾ ಹಿಮವು ಆವರಿಸಿತ್ತು. ಹೀಗಾಗಿ ಸ್ವಾಮೀಜಿಯವರು ಇಡೀ ಒಂದು ದಿನ ಮತ್ತು ಒಂದು ರಾತ್ರಿಯ ಕಾಲ ಪ್ರಯಾಣ ಮಾಡಬೇಕಾಯಿತು. ಇದನ್ನು ಸ್ವಾಮೀಜಿಯವರೇ ಸ್ವಾರಸ್ಯವಾಗಿ ಶ್ರೀಮತಿ ಹೇಲ್ ಅವರಿಗೆ ಬರೆದ ತಮ್ಮ ಈ ಪತ್ರದಲ್ಲಿ ವಿವರಿಸುತ್ತಾರೆ:

''ರಾತ್ರಿ ಒಂದು ಗಂಟೆಯ ಸುಮಾರಿಗೆ ಕ್ಷೇಮವಾಗಿ ಬಂದು ತಲುಪಿದೆನು. ರೈಲು ಬರುವುದು ೭ ಗಂಟೆಗಳಷ್ಟು ವಿಳಂಬವಾಯಿತು. ಇದಕ್ಕೆ ಕಾರಣ ದಾರಿಯಲ್ಲಿ ರೈಲು ಹಳಿಯ ಮೇಲೆ ಮಂಜಿನ ಗಡ್ಡೆಗಳು ಬಿದ್ದಿದ್ದವು. ಆದರೆ ಈ ಅಪೂರ್ವ ದೃಶ್ಯದ ನವೀನತೆಯನ್ನು ನಾನು ಬಹಳ ಆನಂದದಿಂದ ಅನುಭವಿಸಿದೆನು. ಹಲವು ಜನರು ಮಂಜಿನ ಗಡ್ಡೆಗಳನ್ನು ಕಡೆಯುತ್ತಿದ್ದರು ಮತ್ತು ಎರಡು ರೈಲ್ವೇ ಇಂಜಿನ್ನುಗಳು ಮೇಲೆ ಕೆಳಗೆ ಹೋಗುತ್ತ, ಮಂಜಿನ ರಾಶಿಯನ್ನು ತೆರವು ಮಾಡುತ್ತಿದ್ದವು.

''ಇಲ್ಲಿ (ಡೆಟ್ರಾಯ್ಟ್) ನಾನು ಪೌಲ್ ಎಫ್. ಬ್ಯಾಗ್ಲಿ (ಶ್ರೀಮತಿ ಬ್ಯಾಗ್ಲಿ ಅವರ ಮಗ) ಅವರನ್ನು ರೈಲ್ವೇ ನಿಲ್ದಾಣದಲ್ಲಿ ಭೇಟಿ ಮಾಡಿದರು. ಅವರು ನನ್ನನ್ನು ಆದರಿಂದ ಬರಮಾಡಿಕೊಂಡರು. ಅವರ ಮನೆಗೆ ಹೋದೆವು. ಬಹಳ ರಾತ್ರಿಯಾಗಿದ್ದರಿಂದ, ಶ್ರೀಮತಿ ಬ್ಯಾಗ್ಲಿ ಅವರು ವಿಶ್ರಮಿಸುತ್ತಿದ್ದರು. ಆದರೆ ಹೆಣ್ಣು ಮಕ್ಕಳು ನನಗಾಗಿ ಕಾಯುತ್ತಿದ್ದರು.''

ಬ್ಯಾಗ್ಲಿ ಕುಟುಂಬವು ಸ್ವಾಮೀಜಿಯವರನ್ನು ಹಾರ್ದಿಕವಾಗಿ ಸ್ವಾಗತಿಸಿತು, ಇದು ಸರಿಯೇ. ಆದರೆ, ಮುಂದಿನ ಆರು ವಾರಗಳ ಕಾಲ, ಅವರು ಎದುರಿಸಬೇಕಾದ ಪ್ರತಿರೋಧದ ಕಾರ್ಮೋಡಗಳು ಆಗಲೇ ಕವಿದಿದ್ದವು. ಡೆಟ್ರಾಯ್ಟ್ ನಗರದಲ್ಲಿ ಸ್ವಾಮೀಜಿ ಕೇವಲ ಸ್ವಾಗತವನ್ನು ಪಡೆಯಲಿಲ್ಲ ; ಕಟು ವಿರೋಧವನ್ನೂ ಎದುರಿಸಬೇಕಾಯಿತು. ಇದು ಕಟು ಸತ್ಯ. ಅವರ ಆಗಮನದ ಮರುದಿನ ಸಂಜೆ, ಶ್ರೀಮತಿ ಬ್ಯಾಗ್ಲಿ ತನ್ನ ಮನೆಯಲ್ಲಿ ದೊಡ್ಡದೊಂದು ಸ್ವಾಗತಕೂಟವನ್ನು ಏರ್ಪಡಿಸಿದ್ದರು. ಆಕೆ ಸ್ವಾಮೀಜಿಯವರನ್ನು ಸರ್ವಧರ್ಮ ಸಮ್ಮೇಳನದ ಸಮಯದಲ್ಲಿಯೇ ಭೇಟಿಯಾಗಿದ್ದಳು. ಇದಲ್ಲದೆ ಶ್ರೀಮತಿ ಬ್ಯಾಗ್ಲಿ ಬಹಳ ಪ್ರಭಾವಶಾಲಿಯಾದ ಮಹಿಳೆ. ಹೀಗಾಗಿ ಡೆಟ್ರಾಯ್ಟ್ ನಗರದ ಎಲ್ಲ ಪ್ರತಿಷ್ಠಿತರನ್ನು ತನ್ನ ಸ್ವಾಗತಕೂಟಕ್ಕೆ ಆಹ್ವಾನಿಸಿದರು. ಇವರೆಲ್ಲ ಹಿಂದೂ ಸಂನ್ಯಾಸಿಗೆ ಗೌರವವನ್ನು ನೀಡಲು ಆಕೆಯ ಮನೆಗೆ ಬಂದಿದ್ದರು. ಆಕೆಯ ಮನೆ ಬೃಹತ್ತಾಗಿತ್ತು; ಸುಂದರವಾಗಿತ್ತು. ಆಕೆಯ ಮನೆಗೆ ರಾಲ್ಫ್ ವಾಲ್ಡೋ ಎಮರ್‌ಸನ್, ಬ್ರಾನ್‌ಸನ್ ಅಲ್ಕಾಟ್ ಮತ್ತು ಮ್ಯಾಥ್ಯೂ ಅರ್ನಾಲ್ಡ್ ಮುಂತಾದ ಅಮೆರಿಕೆಯ ಪ್ರತಿಷ್ಠಿತ ವ್ಯಕ್ತಿಗಳು ಭೇಟಿಕೊಟ್ಟಿದ್ದರು. ಟ್ರಿಬ್ಯೂನ್ ಎಂಬ ಪತ್ರಿಕೆಯ ಫೆಬ್ರವರಿ ೧೪, ೧೮೯೪ರ ಸಂಚಿಕೆಯಲ್ಲಿ ಶ್ರೀಮತಿ ಬ್ಯಾಗ್ಲಿ ಅಹ್ವಾನಿಸಿದ್ದ ಪ್ರತಿಷ್ಠಿತ ವ್ಯಕ್ತಿಗಳ ಪಟ್ಟಿಯನ್ನು ಮುದ್ರಿಸಲಾಗಿತ್ತು. ಈ ಪಟ್ಟಿಯನ್ನು ಸಣ್ಣ ಅಕ್ಷರಗಳಲ್ಲಿ ಮುದ್ರಿಸಲಾಗಿದ್ದರೂ, ಅದು ಬಹಳಷ್ಟು ದೊಡ್ಡದಾಗಿಯೇ ಇತ್ತು. ಒಟ್ಟಾರೆ, ಸ್ವಾಮೀಜಿ, 'ಸಮುದಾಯದ ಸಿಂಹ' (Social Lion) ಆಗಿಬಿಟ್ಟಿದ್ದರು.



ಶ್ರೀಮತಿ ಜಾನ್ ಜೆ. ಬ್ಯಾಗ್ಲಿ

ಡೆಟ್ರಾಯ್ಟ್ ಜರ್ನಲ್ ಪತ್ರಿಕೆಯು ಫೆಬ್ರವರಿ ೧೪, ೧೮೯೪ರ ತನ್ನ ಸಂಚಿಕೆಯಲ್ಲಿ ಈ ಸ್ವಾಗತ ಸಮಾರಂಭದ ವರದಿಯನ್ನು ಪ್ರಕಟಿಸಿತು. ಅದು ಸಂಕ್ಷಿಪ್ತ ರೂಪ ಹೀಗಿದೆ:

''ಸ್ವಾಮಿ ವಿವೇಕಾನಂದರು ಈಗ ಶ್ರೀಮತಿ ಜಾನ್ ಜೆ. ಬ್ಯಾಗ್ಲಿ ಅವರ ಅತಿಥಿಯಾಗಿದ್ದಾರೆ. ಅವರ ಮನೆಯು ಡೆಟ್ರಾಯ್ಟ್ ನಗರದ ಗ್ರಾಂಡ್ ಸರ್ಕಸ್ ಪಾರ್ಕಿನಲ್ಲಿದೆ. ಹಿಂದಿನ ರಾತ್ರಿ ಸ್ವಾಮಿ ವಿವೇಕಾನಂದರಿಗೆ ಭವ್ಯವಾದ ಸ್ವಾಗತ ಸಮಾರಂಭವನ್ನು ಇಲ್ಲಿ ಏರ್ಪಡಿಸಲಾಗಿತ್ತು. ಇಲ್ಲಿ ನೆರೆದವರೆಲ್ಲರೂ ತತ್ತ್ವಶಾಸ್ತ್ರ ಮತ್ತು ಅತೀಂದ್ರಿಯ ಅನುಭವಗಳ ವಿಚಾರದಲ್ಲಿ ಆಸಕ್ತಿ ಹೊಂದಿದ್ದವರೇ ಆಗಿದ್ದರು. ಸ್ವಾಮಿ ವಿವೇಕಾನಂದರು ಈ ಸಮಾವೇಶದಲ್ಲಿ ಪರಿಶುದ್ಧ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡಿದರು. ಹಾಗೆಯೇ ಅಲ್ಲಿ ನೆರೆದವರೊಡನೆ ಬಹಳ ಆತ್ಮೀಯವಾಗಿ ಒಡನಾಡಿದರು. ಅವರೆಲ್ಲರೂ ಸ್ವಾಮಿ ವಿವೇಕಾನಂದರನ್ನು ಭೇಟಿ ಮಾಡುವುದು ಒಂದು ಗೌರವದ ವಿಷಯವೆಂದೇ ಭಾವಿಸಿದ್ದರು.''

ಡೆಟ್ರಾಯ್ಟ್ ಟ್ರೈಬ್ಯೂನ್ ಎಂಬ ಪತ್ರಿಕೆ ಹೀಗೆ ವರದಿ ಮಾಡಿತು:

''ಈ ಸ್ವಾಗತ ಸಮಾರಂಭದ ವೈಶಿಷ್ಟ್ಯವೆಂದರೆ ಬಹುತೇಕ ಎಲ್ಲ ಧಾರ್ಮಿಕ ಪಂಗಡದವರೂ ಇಲ್ಲಿ ನೆರೆದಿದ್ದರು. ಹೀಗಾಗಿ ಇದು ಸರ್ವಧರ್ಮ ಸಮ್ಮೇಳನದ ಧ್ಯೇಯವನ್ನೇ ಪ್ರತಿನಿಧಿಸುತ್ತಿತ್ತು. ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದ ಬಹಳ ಪ್ರಮುಖ ವ್ಯಕ್ತಿಯಾಗಿದ್ದರು ಎನ್ನುವುದು ತಿಳಿದ ವಿಷಯವೇ. ಇದೊಂದು ಕೇವಲ ಸಾಮಾಜಿಕ ಕೂಟವಾಗಿರಲಿಲ್ಲ; ತುಂಬು ಆಸಕ್ತಿ ಹೊಂದಿದ್ದ ಬೌದ್ಧಿಕ ವರ್ಗದ ಜನರು ಅಲ್ಲಿ ಸೇರಿದ್ದರು. ಅವರಾರಿಗೂ ನಿರಾಸೆಯಾಗಲಿಲ್ಲ. ಅವರೆಲ್ಲರೂ ಶ್ರೀಮತಿ ಬ್ಯಾಗ್ಲಿ ಅವರ ಆತಿಥ್ಯದಿಂದ ಸಂತುಷ್ಟರಾದರು.''

ಇಂಥ ಹರ್ಷದ ವಾತಾವರಣದಲ್ಲಿಯೂ ಹುಳಿ ಹಿಂಡುವಂಥ ಕಹಿ ಪ್ರಸಂಗವೊಂದು ಜರುಗಿತು. ಸ್ವಾಮಿ ವಿವೇಕಾನಂದರು ಇನ್ನೂ ಒಂದು ವಾಕ್ಯವನ್ನೂ ಉಚ್ಚರಿಸಿರಲಿಲ್ಲ ; ಅಷ್ಟರಲ್ಲಿಯೇ ಆಹ್ವಾನಿತಳಾಗಿದ್ದ ಮಹಿಳೆಯೊಬ್ಬಳು ಬಹಳ ಒರಟುತನದಿಂದ ನಡೆದುಕೊಂಡಳು; ಸ್ವಾಮೀಜಿಯವರನ್ನು ಅನವಶ್ಯಕವಾಗಿ ಹೀಯಾಳಿಸಿದಳು. ಆದರೆ ಸ್ವಾಮೀಜಿ ಇದನ್ನು ಶಾಂತಚಿತ್ತದಿಂದ ಯಾವ ರೀತಿಯಲ್ಲಿಯೂ ಪ್ರತಿಕ್ರಿಯೆ ಮಾಡದೆ, ಎದುರಿಸಿದರು.

ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯಲ್ಲಿ ಶ್ರೀಮತಿ ಬ್ಯಾಗ್ಲಿ ಅವರನ್ನು ಮಿಷಿಗನ್ ರಾಜ್ಯದ ರಾಜ್ಯಪಾಲರ ಪತ್ನಿ ಮತ್ತು ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪ್ರವೃತ್ತಿಯುಳ್ಳವರು ಎಂದು ವಿವರಿಸಲಾಗಿದೆ. ಆ ಸಮಯಕ್ಕೆ ಆಕೆಯ ಪತಿ ತೀರಿಕೊಂಡಿದ್ದರು. ಇದಲ್ಲದೆ ಆಕೆಯು ಬಹಳ ಧೈರ್ಯವಂತೆಯೂ ಕೂಡ. ಏಕೆಂದರೆ ಆ ಕಾಲದಲ್ಲಿ ಒಬ್ಬ 'ಅಧಾರ್ಮಿಕ' ವ್ಯಕ್ತಿಯೆಂದು ಕಟ್ಟಾ ಸಂಪ್ರದಾಯದ ಕ್ರೈಸ್ತ ಪಾದ್ರಿಗಳಿಂದ ನಿಂದಿಸಲ್ಪಟ್ಟ ಒಬ್ಬ ವ್ಯಕ್ತಿಯನ್ನು ತನ್ನ ಮನೆಗೆ ಆಹ್ವಾನಿಸುವುದಕ್ಕೆ ಗುಂಡಿಗೆಯ ಹೃದಯವೇ ಬೇಕಾಗುತ್ತದೆ. ಇದಕ್ಕಾಗಿ ಶ್ರೀಮತಿ ಬ್ಯಾಗ್ಲಿ ಅವರನ್ನು ಹಲವರು ಕಟುವಾಗಿ ನಿಂದಿಸಿದರು ಕೂಡ. ಆಕೆಯ ಮೊಮ್ಮಗಳಾದ ಶ್ರೀಮತಿ ಫ್ರಾನ್ಸೆಸ್ ಬ್ಯಾಗ್ಲಿ ವ್ಯಾಲೇಸ್ ಆಗ ಒಂಬತ್ತು ವರ್ಷದ ಚಿಕ್ಕ ಹುಡುಗಿ. ಅವಳು ಮುಂದೊಮ್ಮೆ ಸ್ಮರಿಸಿಕೊಳ್ಳುತ್ತಾಳೆ: ಅವಳು ತನ್ನ ಶಾಲೆಗೆ ಹೋದಾಗ, ಅಲ್ಲಿನ ಮಕ್ಕಳು ಅವಳನ್ನು ವಿಚಿತ್ರ ಮುಖ ಮಾಡಿ ಅಣಕಿಸುತ್ತಿದ್ದರಂತೆ. ಇದಕ್ಕೆ ಕಾರಣ 'ಅಧಾರ್ಮಿಕ' ವ್ಯಕ್ತಿಯೊಬ್ಬರನ್ನು ಅವರ ಮನೆಯಲ್ಲಿ ಅತಿಥಿಯನ್ನಾಗಿ ಉಳಿಸಿಕೊಂಡಿದ್ದುದು !


ಶ್ರೀಮತಿ ಬ್ಯಾಗ್ಲಿಯವರ ಮನೆ,
ವಾಷಿಂಗ್ಟನ್ ಅವೆನ್ಯೂ , ಡೆಟ್ರಾಯ್ಟ್

ಆದರೆ ಶ್ರೀಮತಿ ಬ್ಯಾಗ್ಲಿ ಡೆಟ್ರಾಯ್ಟ್ ನಗರದಲ್ಲಿ ಬಹಳಷ್ಟು ಪ್ರಸಿದ್ಧ ವ್ಯಕ್ತಿಯಾಗಿದ್ದರು ಮತ್ತು ಗೌರವಾನ್ವಿತ ಮಹಿಳೆಯಾಗಿದ್ದರು. ಹೀಗಾಗಿ ಆಕೆಯು ಈ ಎಲ್ಲ ಕಟುನಿಂದೆಗಳನ್ನು ಕೂಡ ತನ್ನ ಎದೆಗಾರಿಕೆಯಿಂದ ಎದುರಿಸಿದರು. ಅಷ್ಟೇ ಅಲ್ಲ, ಡೆಟ್ರಾಯ್ಟ್ ನಗರದ ಪ್ರತಿಷ್ಠಿತ ವ್ಯಕ್ತಿಗಳು ಮತ್ತು ಪಾದ್ರಿಗಳು ಸ್ವಾಮೀಜಿಯವರನ್ನು ಸ್ವಾಗತಿಸಲು ಬರುವಂತೆ ಮಾಡಿದ ಸಾಮರ್ಥ್ಯ ಆಕೆಗೆ ಇತ್ತು. ಹೀಗಾಗಿ ಇತರರ ಭಯದಿಂದ ಬರಲು ಅಂಜುತ್ತಿದ್ದ ಜನರು ಕೂಡ ಸ್ವಾಮೀಜಿಯವರ ಸಾನ್ನಿಧ್ಯಕ್ಕೆ ಬಂದರು ಮತ್ತು ಅವರ ದರ್ಶನದ ಸದವಕಾಶವನ್ನು ಪಡೆದುಕೊಂಡರು.

*(ಮುಂದುವರಿಯುವುದು)*